ಅಂತಹ ಸ್ಥಿತ್ಯಂತರಗಳನ್ನು ಅರ್ಥೈಸಿಕೊಂಡು ಮುನ್ನಡೆಯುವುದೇ ಲೇಖಕನ ಬಹುಮುಖ್ಯ ಲಕ್ಷಣ. ಹಾಗಾದಾಗಲೇ ಸಾಹಿತ್ಯವೆನ್ನುವುದು ಕೇವಲ ಪದಗಳೊಂದಿಗಿನ ಕ್ರೀಡೆಯಾಗದೆ, ಸಮಾಜವೆನ್ನುವ ಆತ್ಮಕ್ಕೆ ಅನಂತ ಬಣ್ಣಗಳನ್ನು ತುಂಬಲು ಸಾಧ್ಯವಾಗುತ್ತದೆ.

ಸಾಮಾಜಿಕ ಜವಾಬ್ದಾರಿ ಇದ್ದಾಗ ಮಾತ್ರ ಒಬ್ಬ ಲೇಖಕ ತನ್ನ ಲೋಕಾನುಭವವನ್ನು ವರ್ತಮಾನಕ್ಕೆ ಮುಖಾಮುಖಿಯಾಗಿಸಲು ಸಾಧ್ಯ. ಹಾಗೆ ನೋಡಿದರೆ ಸಾಮಾಜಿಕತೆಯ ಉಪಉತ್ಪನ್ನವೇ ಪ್ರತಿಯೊಬ್ಬ ಬರಹಗಾರನ ವ್ಯಕ್ತಿತ್ವವಾಗಿರುತ್ತದೆ.

**◆ ಬರವಣಿಗೆ ಎನ್ನುವುದು ಒಂದು ಅಗ್ನಿದಿವ್ಯ. ಇಂತಹ ಅಗ್ನಿದಿವ್ಯವನ್ನು ಹಾದು ಬಂದ ತಾವು ಅನುಭವಿಸಿದ ಸಂದರ್ಭಗಳನ್ನು ವಿವರಿಸಬಹುದೇ?**

ನಾನು ನಡೆದದ್ದು ಬಹುಪಾಲು ದುರ್ಗಮದ ಹಾದಿ. ಸುತ್ತಣ ಸಮಾಜ ಎಷ್ಟೇ ಬಿಗಿಬಂಧನಗಳನ್ನು ನಿರ್ಮಿಸಿದರೂ ನಾನು ರೂಪಿಸಿಕೊಂಡ ಮುಕ್ತ ನೋಟ ನನ್ನನ್ನು ಇಲ್ಲಿಯವರೆಗೆ ಕರೆದುಕೊಂಡು ಬಂದಿದೆ. ಇದು ಅಕ್ಷರದ ಬೆರಗು. ಸಮಾಜದ ಅಂಚಿನಿಂದ ಬಂದ ವ್ಯಕ್ತಿಯೊಬ್ಬ ಸಾಂಪ್ರದಾಯಿಕ ಬದುಕು ನಿರಾಕರಿಸಿದ್ದ ಕಟ್ಟಕಡೆಯ ಮನುಷ್ಯರ ಸ್ಥಿತಿಗತಿಗಳನ್ನು ಕಟ್ಟಿಕೊಡುವಾದ ಸಹಜವಾಗಿಯೇ ಅಡ್ಡಿಆತಂಕಗಳು ಎದುರಾಗುತ್ತವೆ. ಅದು ಕೆಲವು ಸಲ ಹೊರಗಿನವರಿಂದಲೂ ಮತ್ತೆ ಕೆಲವು ಸಲ ಒಳಗಿನವರಿಂದಲೂ ಸೃಷ್ಟಿಯಾಗುತ್ತವೆ. ಅಂತಹವುಗಳೆಲ್ಲವನ್ನೂ ಸಮಚಿತ್ತದಿಂದ ಎದುರಿಸುವ ಬೌದ್ಧಿಕ ತಾಕತ್ತು ನನಗೇನಾದರೂ ಇದೆ ಎನ್ನುವುದಾದರೆ ಅದು ಬಾಬಾಸಾಹೇಬರ ತತ್ವಗಳ ತಿಳಿವಳಿಕೆ ಮತ್ತು ಅಲ್ಪ ಮಟ್ಟಿನ ಅನುಸರಣೆಯಿಂದಲೇ ಬಂದದ್ದು ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

**◆ ತಮ್ಮ ಲೇಖನಿ ಕಾವ್ಯದ ಕಾವನ್ನು ಹೆಚ್ಚು ಅನುಭವಿಸಿಲ್ಲವೇಕೆ?**

ನಿಜ. ಒಂದು ಕವನ ಸಂಕಲನ ಮಾತ್ರ ಬಂದಿದೆ. ಶಬ್ದದ ಹದವನ್ನು ಕವಿತೆಯ ಭಾವದಲ್ಲಿ ಬೆಳೆಸದೆ ಗದ್ಯದ ಬಯಲಲ್ಲಿ ಬೆಳೆಸಲು ಹೆಚ್ಚು ಒತ್ತು ನೀಡಿದ್ದೇನೆ. ಕಾವ್ಯಕ್ಕೆ ಬೇಕಾದ ಶಬ್ದ-ನಾದದ ಸೌಂದರ್ಯವನ್ನು ಹಿಡಿಯಲು ಹೆಚ್ಚು ಪ್ರಯತ್ನಿಸಿಲ್ಲ. ಗದ್ಯದ ಲಯದ ಜಾಡಿನಲ್ಲಿಯೇ ನನ್ನ ಲೇಖನಿಯು ಸರಾಗವಾಗಿ ಸಾಗುತ್ತಿದೆ.

**◆ 'ಬಯಲೆಂಬೊ ಬಯಲು' ನಿಮ್ಮ ಮುಖ್ಯ ಕೃತಿಗಳಲ್ಲೊಂದು. ಕನ್ನಡದ ಮೊದಲ ದಲಿತ ಬಯೋಪಿಕ್ ಕಾದಂಬರಿ ಎಂಬ ಅಗ್ಗಳಿಕೆ ಅದರದ್ದು. ಆ ಕೃತಿ ರೂಪುಗೊಂಡಿದ್ದರ ಹಿನ್ನೆಲೆ ಏನು?**

ಕಥೆಗಳನ್ನು ಮಾತ್ರ ಬರೆಯುತ್ತಿದ್ದವನು ಕಾದಂಬರಿಯನ್ನೇಕೆ ಬರೆಯಬಾರದು ಅಂದುಕೊಂಡಾಗ ರೂಪುಗೊಂಡದ್ದೇ 'ಬಯಲೆಂಬ ಬಯಲು'. ಆ ಕಾದಂಬರಿಗೆ ವಸ್ತುವನ್ನು ಎಲ್ಲಿಂದ ತರುವುದು ಎಂದು ಆಲೋಚಿಸುತ್ತ ನನ್ನ ಬದುಕನ್ನೇ ನಾನು ಒಮ್ಮೆ ಪುನರ್ ಅವವಲೋಕನ ಮಾಡಿಕೊಂಡೆ. ಆಗ ನನಗಲ್ಲಿ ಕಂಡದ್ದು ನನ್ನ ಗತದ ಬದುಕಿನ ದುಃಖ, ಅವಮಾನ, ಸಂಕಟ, ತಳಮಳ, ತಗಾದೆಗಳು. ಅವುಗಳ ಹಿನ್ನೆಲೆಯಲ್ಲಿಯೇ ಆ ಕಾದಂಬರಿಯನ್ನು ಕಟ್ಟಿದೆ. ಅದು ಮೂರು ತಲೆಮಾರುಗಳ ದಲಿತ ಸಂವೇದನೆಗಳನ್ನು ಹೊತ್ತು ನಿಂತಿದೆ. ತಲೆಮಾರಿನಿಂದ ತಲೆಮಾರಿಗೆ ಬದಲಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳು ಹೇಗೆ ಶೋಷಣೆಯೆಂಬ ಸೂತಕವನ್ನು ದಲಿತರ ಬೆನ್ನಿಗಂಟಿಸಿವೆ ಎಂಬುದನ್ನು ನನ್ನ ಕುಟುಂಬದ ನೈಜಾನುಭವಗಳ ಹಿನ್ನೆಲೆಯಲ್ಲಿಯೇ ಅಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದೇನೆ.

**◆ ಒಬ್ಬ ಲೇಖಕನಿಗೆ ಪ್ರಾದೇಶಿಕತೆ ಎಷ್ಟು ಮುಖ್ಯ? ತಮ್ಮ ಅನುಭವದಲ್ಲಿ ಅದನ್ನು ವಿವರಿಸಬಹುದೇ?**

ಪ್ರಾದೇಶಿಕತೆಯ ಹಿನ್ನೆಲೆಯುಳ್ಳ ಬರಹ ತುಂಬಾ ಗಟ್ಟಿಯಾಗಿಯೂ, ವಿಸ್ತೃತವಾಗಿಯೂ ರೂಪುಗೊಂಡಿರುತ್ತದೆ. ಹಾಗಂತ ಉಳಿದ ಬರಹಗಳು ಗಟ್ಟಿಯಾಗಿಲ್ಲ ಎಂದರ್ಥವಲ್ಲ. ಈಗ ಸಂಸ್ಕೃತಿಗೆ ಸಂಬಂಧಿಸಿದ ವಿಷಯವನ್ನೇ ತೆಗೆದುಕೊಳ್ಳಿ. ಇಡೀ ಭಾರತ ದೇಶದ ಸಂಸ್ಕೃತಿಯನ್ನು ಕುರಿತು ಒಟ್ಟಿಗೆ ಹೇಳುವುದಕ್ಕೂ, ಅದು ಒಳಗೊಂಡಿರುವ ಹಲತನಗಳನ್ನು ಬಿಡಿಬಿಡಿಯಾಗಿ ಸ್ಥಳೀಯ ನೆಲೆಯಲ್ಲಿ